



ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಮಾಳ ದಟ್ಟ ಹಸಿರು ಸುತ್ತುವರೆದ ಸುಂದರ ಊರು. ಅಲ್ಲಿನ ಗಿರಿಜನ ಕಾಲೊನಿಗೆ ರಸ್ತೆಯಿಲ್ಲವೆಂಬ ಕೊರಗನ್ನು ಗೋವಿಂದ ಮಲೆಕುಡಿಯ ದೂರ ಮಾಡಿದ್ದಾರೆ. ಏಕಾಂಗಿಯಾಗಿ ಅವರು ರಸ್ತೆ ರೂಪಿಸಿದ ಕಥನ ಇತರರಿಗೆ ಮಾದರಿ.

■ ಕೋಡಿಬೆಟ್ಟು ರಾಜಲಕ್ಷ್ಮಿ

ಚಿತ್ರಗಳು: ರಾಮ್ ಅಜೆಕಾರ್



# ಹಸಿರುಸಖ ಮಾಳದ ಗೋವಿಂದಣ್ಣ ಏಕಾಂಗಿಯಾಗಿ ರಸ್ತೆ ನಿರ್ಮಿಸಿದರಣ್ಣ



'ನಾನೊಬ್ಬನೇ ಈ ರಸ್ತೆ ಮಾಡಿದ್ದೇನೆ ಎಂದು ಹೇಳಿಕೊಂಡರೆ ಅದು ತಪ್ಪಾಗುತ್ತದೆ. ದೇವರು ಮಾಡಿಸಿದ್ದರಿಂದ ನಾನು ಮಾಡುವುದು ಸಾಧ್ಯವಾಯಿತು. ಈಗ ನೋಡಿದರೆ, ಎಲ್ಲರೂ ನನ್ನನ್ನು ಹೊಗಳುತ್ತಿದ್ದಾರೆ. ಅದೆಲ್ಲ ಸರಿಯಲ್ಲ, ಕೆಲಸ ಮಾಡಲು ಶಕ್ತಿ ಕೊಡುವುದು ದೇವರ ದಯೆಯಷ್ಟೆ. ನಮ್ಮೂರಿಗೆ ಒಂದು ರಸ್ತೆಯ ಅಗತ್ಯವಿತ್ತು ಅನ್ನಿಸಿದ್ದರಿಂದ ನಾನು ಎರಡು ವರ್ಷಗಳ ಹಿಂದೆ ಈ ಕೆಲಸ ಸುರು ಮಾಡಿದೆ. ಅದಕ್ಕೂ ಹಲವು ಅಡೆತಡೆಗಳು ಬಂದರೂ ಕೆಲಸ ಮುಂದುವರೆಸುವುದಕ್ಕೆ ಶಕ್ತಿ ಎಲ್ಲಿಂದ ಬರಬೇಕು...'

ತಮ್ಮದಲ್ಲದ ಸಾಧನೆಯ ಕೀರ್ತಿಯನ್ನೂ ಪಡೆಯಲು ಹಿಂಜರಿಯದವರ ನಡುವೆ, ಗೋವಿಂದ ಮಲೆಕುಡಿಯ ಅವರ ಮಾತುಗಳಲ್ಲಿ 'ತನ್ನದೇನೂ ಇಲ್ಲ' ಎನ್ನುವ ಭಾವವೇ ಎದ್ದುಕಾಣಿಸುತ್ತಿತ್ತು.

ಸಹ್ಯಾದ್ರಿಯ ತಪ್ಪಲು ಪ್ರದೇಶದಲ್ಲಿರುವ ಕಾರ್ಕಳ ತಾಲ್ಲೂಕಿನ ಮಾಳ ಗ್ರಾಮ ದಟ್ಟ ಹಸಿರಿನಿಂದ ಕೂಡಿದ ಸುಂದರ ಪ್ರದೇಶ. ಕಗ್ಗಾಡಿಗೆ ಮುಖಮಾಡಿ ನಿಂತಿರುವ ಮಾಳ ಗ್ರಾಮದ ಪೇರಡ್ಕ ಎಂಬಲ್ಲಿ ಗಿರಿಜನರ ಕಾಲೊನಿಯೊಂದಿದೆ. ಈ ಕಾಲೊನಿಯ ಅಂಚಿಗೆ ಇರುವ ಸುಮಾರು ಇಪ್ಪತ್ತೈದು ಕುಟುಂಬಗಳ ಸದಸ್ಯರು ತಮ್ಮ ಮನೆಗೆ ನಡೆದುಕೊಂಡೇ ಹೋಗಬೇಕಿತ್ತು. 'ಇಲ್ಲೊಂದು ರಸ್ತೆ ಮಾಡಿಕೊಡಿ' ಎಂದು ಮಾಳ ಗ್ರಾಮ ಪಂಚಾಯಿತಿಗೆ ಹಲವು ವರ್ಷಗಳಿಂದ ಮನವಿ ಸಲ್ಲಿಸಿದರೂ ಪಂಚಾಯಿತಿಯಿಂದ ಸಕಾರಾತ್ಮಕ ಪ್ರತಿಕ್ರಿಯೆ ದೊರೆಯಲಿಲ್ಲ. ಸ್ವತಃ ಗೋವಿಂದ